# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 537 |
| ಸದಸ್ಯರ ಹೆಸರು | : | ಶ್ರೀ. ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 19-07-2024. |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಾಲನ್ಯಾಯ ಕಾಯ್ದೆ 2015ರ ಜಾರಿಗೆ ಬಂದು 9 ವರ್ಷಗಳಾದರೂ ಅದರ ಎಲ್ಲಾ ಅಂಶಗಳು ಇದುವರೆಗೂ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯದಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಜಾರಿಯಲ್ಲಿದ್ದು, ಸದರಿ ಕಾಯ್ದೆಯಲ್ಲಿನ ಅಂಶಗಳನ್ನು ರಾಜ್ಯದಲ್ಲಿ ಈಗಾಗಲೇ ಜಾರಿಗೊಳಿಸಲಾಗಿದೆ. |
| ಆ) | ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳು ಗಂಭೀರ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮತ್ತು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ರಾಜ್ಯದಲ್ಲಿ ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳಿಗಾಗಿ 17 ವೀಕ್ಷಣಾಲಯಗಳು, 01 ಪ್ಲೇಸ್ ಆಫ್ ಸೇಫ್ಟಿ ಮತ್ತು 01 ವಿಶೇಷಗೃಹವು ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಸಂಸೆ ಗಳಲ್ಲಿ ಜೂನ್, 2024ರ ಅಂತ್ಯಕ್ಕೆ ಒಟ್ಟು 123 ಮಕ್ಕಳು ಅಭಿರಕ್ಷಣೆಯಲ್ಲಿರುತ್ತಾರೆ. ಸದರಿ ಸಂಸ್ಥೆಗಳಲ್ಲಿ ನಿರಂತರವಾಗಿ ಮಕ್ಕಳಿಗೆ ಆಪ್ತಸಮಾಲೋಚನೆ ಮಾಡಲಾಗುತ್ತಿದ್ದು, ಮಕ್ಕಳು ಮಾನಸಿಕ ಖಾಯಿಲೆಯಿಂದ ಬಳಲುತ್ತಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. ಅವಶ್ಯಕ ಇದ್ದಲ್ಲಿ ನಿಮಾನ್ಸ್ ಸಂಸ್ಥೆಯ ಸೇವೆಯನ್ನು ಪಡೆಯಲಾಗುತ್ತಿದೆ. |
| ಇ) | ಮಕ್ಕಳ ವಿಚಾರಣೆ ಪರಿವೀಕ್ಷಣಾಲಯಗಳಲ್ಲಿ ನಿಗಧಿತ ನಾಲ್ಕು ತಿಂಗಳ ಕಾಲಾವಧಿಯಲ್ಲಿ ನಡೆಯದಿರುವುದರಿಂದ ಅನಾವಶ್ಯಕವಾಗಿ ಮಕ್ಕಳು ಖಿನ್ನತೆ, ಆತಂಕ ಮತ್ತು ಅಕ್ರಮಣಕಾರಿ ಸಮಸ್ಯೆಗಳಿಂದ ಬಳಲುತ್ತಿರುವುದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | ಕಾನೂನು ಸಂಘರ್ಷಕ್ಕೊಳಪಟ್ಟ ಮಕ್ಕಳ ವಿಚಾರಣೆಗಾಗಿ ಪ್ರತಿ ಜಿಲ್ಲೆಯಲ್ಲೂ ಬಾಲನ್ಯಾಯ ಮಂಡಳಿಗಳು ಕಾರ್ಯನಿರ್ವಹಿಸುತ್ತಿದೆ.<br><br>ಪ್ರತಿ ಜಿಲ್ಲೆಯ ಕಾನೂನು ಸಂಘರ್ಷಕ್ಕೊಳಪಟ್ಟ ಮಕ್ಕಳ ಪ್ರಕರಣ ಕುರಿತಂತೆ ಆಯಾಯ ಜಿಲ್ಲೆಯ ಬಾಲನ್ಯಾಯ ಮಂಡಳಿಗಳು ಸಕಾಲದಲ್ಲಿ ಪರಿಶೀಲಿಸಿ ಸೂಕ್ತ ಪುನರ್ವಸತಿ ಕ್ರಮವನ್ನು ವಹಿಸಲಾಗುತ್ತಿರುವುದರಿಂದ ಕಾನೂನು ಸಂಘರ್ಷಕ್ಕೆ ಒಳಪಟ್ಟ ಮಕ್ಕಳು ಖಿನ್ನತೆ, ಆತಂಕ ಸಮಸ್ಯೆಗಳಿಂದ ಬಳಲುತ್ತಿರುವುದರ ಕುರಿತು ವರದಿಯಾಗಿರುವುದಿಲ್ಲ.<br><br>ರಾಜ್ಯದಲ್ಲಿ ಕಾನೂನು ಸಂಘರ್ಷಕ್ಕೊಳಪಟ್ಟ ಮಕ್ಕಳು ಸಂಸ್ಥೆಗಳಲ್ಲಿ ದಾಖಲಾಗಿರುವ ವಿವರವನ್ನು ಅನುಬಂಧ ದಲ್ಲಿ ಒದಗಿಸಿದೆ. |

ಮಮಇ 90 ಮಭಾಬ 2024

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

## ಅನುಬಂಧ

| SL No | Name of the District | Capacity | Present Strength |
|---|---|---|---|
| 1 | Dharwad | 25 | 6 |
| 2 | Kolar | 25 | 2 |
| 3 | Shimoga | 25 | 13 |
| 4 | Vijayapura | 25 | 3 |
| 5 | Hassan | 25 | 3 |
| 6 | Davanagere (Girls) | 25 | 2 |
| 7 | Belgaum | 25 | 5 |
| 8 | Mysore | 25 | 13 |
| 9 | Chithradurga | 25 | 3 |
| 10 | Gulbarga | 25 | 9 |
| 11 | Bellary | 25 | 4 |
| 12 | Bidar | 25 | 3 |
| 13 | Bengaluru Rural | 25 | 1 |
| 14 | Raichur | 25 | 0 |
| 15 | Bengaluru Urban | 100 | 17 |
| 16 | Uttara Kannada | 25 | 1 |
| 17 | Udupi | 25 | 0 |
| **Total** | | **500** | **85** |
| **SL No** | **Place of Safety** | **Capacity** | **Present strength** |
| 1 | Bengaluru | 50 | 6 |
| | | | |
| **SL No** | **Special Home** | **Capacity** | **Present strength** |
| 1 | Bengaluru Urban | 50 | 32 |

**Abstract:**

**Total Number of CICL Children residing in Govt. Run Homes- 123**
**Number of Children having mental issues, depressions, etc. -00**